International Journal of Kannada Research
www.kannadajournal.com

ISSN: 2454–5813
IJKR 2024; 10(1): 113-122
© 2024 IJKR
www.kannadajournal.com
Received: 16-12-2023
Accepted: 20-01-2024

**ಕುಮಾರ್. ಕೆ.**
ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಶಿವಕುಮಾರ ಸ್ವಾಮೀಜಿ ರಸ್ತೆ, ತುಮಕೂರು, ಕರ್ನಾಟಕ, ಭಾರತ

Corresponding Author:
**ಕುಮಾರ್. ಕೆ.**
ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಶಿವಕುಮಾರ ಸ್ವಾಮೀಜಿ ರಸ್ತೆ, ತುಮಕೂರು, ಕರ್ನಾಟಕ, ಭಾರತ

# ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕೌಶಲ್ಯಗಳ ವೃದ್ಧಿಗೆ ಸಹಪಠ್ಯ ಚಟುವಟಿಕೆಗಳ ಪಾತ್ರ

**ಕುಮಾರ್. ಕೆ.**

**DOI:** https://doi.org/10.22271/24545813.2024.v10.i1b.947

**ಸಾರಾಂಶ**
ಸಹಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಕಲಿತ ಸಾಮಾಜಿಕ ಮತ್ತು ಸಂವಹನ ಕೌಶಲ್ಯಗಳು ಮುಂದೆ ಅವರು ಯಾವುದೇ ಕ್ಷೇತ್ರವನ್ನು ಪ್ರವೇಶಿಸಿದರೂ ಸಹಾಯ ಮಾಡುತ್ತವೆ. ಸಾಮಾಜಿಕ ಕೌಶಲ್ಯಗಳನ್ನು ಕಲಿತು, ಜೀವನದಲ್ಲಿ ರೂಢಿಸಿಕೊಳ್ಳುವುದರಿಂದ, ವಿದ್ಯಾರ್ಥಿಗಳು ತಮ್ಮ ಪರಿಚಿತರು, ಮತ್ತು ಸ್ನೇಹಿತರೊಂದಿಗೆ ಸಕಾರಾತ್ಮಕ ಸಂಬಂಧಗಳನ್ನು ಹೊಂದಿ ಉತ್ತಮ ಸಂವಹನ ನಡೆಸಲು ಅನುವು ಮಾಡಿಕೊಡುತ್ತದೆ. ಸಹಪಠ್ಯ ಚಟುವಟಿಕೆಗಳ ಮೂಲಕ ದೈಹಿಕ, ಭಾವನಾತ್ಮಕ, ಆಧ್ಯಾತ್ಮಿಕ ಮತ್ತು ಬೌದ್ಧಿಕ ಅಂಶಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ ಅತ್ಯುತ್ತಮ ಮಾನವ ಸಂಪನ್ಮೂಲದ ಉತ್ಪಾದನೆಯನ್ನು ಅಭಿವೃದ್ಧಿ ಪಡಿಸಬಹುದು. ವಿದ್ಯಾರ್ಥಿಯು ವಿರಾಮದ ವೇಳೆಯಲ್ಲಿ ತರಗತಿಯ ಒಳಗೆ ಅಥವಾ ಹೊರಗೆ ಪರಿಸರ ಮತ್ತು ಸಾಮಾಜಿಕ ಕಲಿಕಾ ಕ್ರಿಯೆಯಲ್ಲಿ ಭಾಗವಹಿಸುವುದರಿಂದ ಮಾನವ ಬಂಡವಾಳ ಅಭಿವೃದ್ಧಿ ಪಡಿಸಬಹುದು. ಆದ್ದರಿಂದ ಈ ಲೇಖನವು ಶಿಕ್ಷಣದ ಕ್ಷೇತ್ರದಲ್ಲಿ ಸಹಪಠ್ಯ ಚಟುವಟಿಕೆಗಳ ಹೆಚ್ಚುತ್ತಿರುವ ಪ್ರಭಾವವನ್ನು ಪರಿಶೋಧಿಸುತ್ತದೆ, ಹಾಗೂ ಬೋಧನೆ ಮತ್ತು ಕಲಿಕೆಯ ವಿಧಾನಗಳಲ್ಲಿ ಸೂಕ್ತ ಬದಲಾವಣೆಯನ್ನು ಸೂಚಿಸುತ್ತದೆ. ಮೊದಲನೆಯದಾಗಿ, ಲೇಖನವು ಸಹಪಠ್ಯ ಚಟುವಟಿಕೆಗಳ ಪರಿಕಲ್ಪನೆಯನ್ನು ಮತ್ತು ಅದರ ಅನುಕೂಲಗಳು, ಸವಾಲುಗಳು ಮತ್ತು ಅದರ ಪ್ರಭಾವವನ್ನು ಚರ್ಚಿಸುತ್ತದೆ. ಸಹಪಠ್ಯ ಚಟುವಟಿಕೆಗಳಲ್ಲಿ ಮಾನವ ಬಂಡವಾಳದ ಕೊಡುಗೆಯನ್ನು ವಿವರಿಸುತ್ತದೆ. ಇದಲ್ಲದೆ, ಶೈಕ್ಷಣಿಕ ಸಾಧನೆಗಾಗಿ ಅವುಗಳನ್ನು ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳಲು ಸಾಧ್ಯವೆಂದು ಈ ಲೇಖನವು ಶಿಫಾರಸುಗಳನ್ನು ಒದಗಿಸುತ್ತದೆ. ಈ ಲೇಖನವು ಶಿಕ್ಷಣ ಸಂಸ್ಥೆಗಳಿಗೆ ಮತ್ತು ಶಿಕ್ಷಕರಿಗೆ ಸಹಪಠ್ಯ ಚಟುವಟಿಕೆಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ.

## ಪರಿಚಯ

ಸಹಪಠ್ಯ ಚಟುವಟಿಕೆಗಳು ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ, ನೈತಿಕ ಮತ್ತು ಕಲಾತ್ಮಕ ಬೆಳವಣಿಗೆ ಸೇರಿದಂತೆ ವೈವಿಧ್ಯಮಯ ಮಾನಸಿಕ ಮತ್ತು ವ್ಯಕ್ತಿತ್ವ ಆಯಾಮಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಸಹಪಠ್ಯ ಚಟುವಟಿಕೆಗಳು ಕ್ರೀಡೆ, ವಾದ-ವಿವಾದ, ಸಂಗೀತ, ಕಲೆ, ಮತ್ತಿತರವನ್ನು ಒಳಗೊಂಡಿವೆ (ಸಿಂಗ್, 2017). ಈ ಚಟುವಟಿಕೆಗಳು ವೈಯಕ್ತಿಕ ಮತ್ತು ವೃತ್ತಿಪರ ಯಶಸ್ಸಿಗೆ ಅಗತ್ಯವಾದ ವಿವಿಧ ಕೌಶಲ್ಯಗಳನ್ನು, ವಿಶೇಷವಾಗಿ ಸಾಮಾಜಿಕ ಕೌಶಲ್ಯಗಳನ್ನು, ಬೆಳೆಸುವಲ್ಲಿ ಮುಖ್ಯವಾಗಿವೆ. ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ, ವಿದ್ಯಾರ್ಥಿಗಳು ಪರಸ್ಪರ ಸಂವಹನ ನಡೆಸುವ, ತಂಡದಲ್ಲಿ ಕೆಲಸ ಮಾಡುವ, ಸಂಘರ್ಷಗಳನ್ನು ಪರಿಹರಿಸುವ ಹಾಗೂ ಇತರರ ಬಗ್ಗೆ ಅನುಕಂಪ ತೋರುವ ಗುಣಗಳನ್ನು ಬೆಳೆಸಿಕೊಳ್ಳಬಹುದು.

ಸಹಪಠ್ಯ ಚಟುವಟಿಕೆಗಳು ಸಾಮಾಜಿಕ ಕೌಶಲ್ಯಗಳ ಮೇಲೆ ಬೀರುವ ಪರಿಣಾಮ ಗಣನೀಯವಾಗಿದೆ ಮತ್ತು ಸುಸ್ಥಿರವಾಗಿ ದಾಖಲಾಗಿದೆ. ಫ್ರೆಡ್ರಿಕ್ಸ್ ಮತ್ತು ಎಕ್ಲೆಸ್ (2006) ಪ್ರಕಾರ, ಈ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಯು, ಸಾಮಾಜಿಕ ಸದ್ಭಾವನೆಯ ಸಕಾರಾತ್ಮಕ ಪರಿಣಾಮಗಳೊಂದಿಗೆ, ಉತ್ತಮ ತಂಡ ಕೌಶಲ್ಯಗಳು, ಮತ್ತು ಉತ್ತಮ ನಾಯಕತ್ವ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬಹುದು. ಈ ಚಟುವಟಿಕೆಗಳು ವಿವಿಧ ಗುಂಪುಗಳೊಂದಿಗೆ ಸಂವಹನದ ಅವಕಾಶಗಳನ್ನು ಒದಗಿಸುತ್ತವೆ, ಸಾಮಾಜಿಕ ಕಲಿಕೆ ಮತ್ತು ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುವ ಸಮಾವೇಶಿ ವಾತಾವರಣವನ್ನು ಬೆಳೆಸುತ್ತವೆ. ಅವರ ಅಧ್ಯಯನದ ಪ್ರಕಾರ ಸಹಪಠ್ಯ ಚಟುವಟಿಕೆಗಳನ್ನು ಉತ್ತೇಜಿಸುವ ಶಾಲಾ ಕಾರ್ಯಕ್ರಮಗಳು, ಮಕ್ಕಳು ಮತ್ತು ಯುವಜನರಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಸಕಾರಾತ್ಮಕ ಪರಿಣಾಮವನ್ನು ಬಿತ್ತುತ್ತದೆ. ಇದು ಸಾಮಾಜಿಕ ಸಾಮರ್ಥ್ಯಗಳನ್ನು ಸುಧಾರಿಸುವಲ್ಲಿ ಗಣನೀಯವಾದ ಕೊಡುಗೆ ನೀಡುತ್ತದೆ ಹಾಗೂ, ವಿದ್ಯಾರ್ಥಿಗಳಿಗೆ ಅವರ ಗುರುತು ಮುಡಿಸಿಕೊಳ್ಳಲುಮತ್ತು ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಲು ಒಂದು ವೇದಿಕೆಯನ್ನು ಒದಗಿಸುತ್ತವೆ. ಈ ಚಟುವಟಿಕೆಗಳ ಮೂಲಕ, ವಿದ್ಯಾರ್ಥಿಗಳು ಭಾವನಾತ್ಮಕ ಮತ್ತು ಸಾಮಾಜಿಕ ಕ್ಷೇಮವನ್ನು ಬೆಂಬಲಿಸುವ ಅರ್ಥಪೂರ್ಣ ಸಂಬಂಧಗಳ ರಚನೆಯನ್ನು ಸುಲಭಗೊಳಿಸುತ್ತಾರೆ. ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯ ಮಾನಸಿಕ ಆರೋಗ್ಯವನ್ನು ಉತ್ತೇಜಿಸಲು ಮತ್ತು ವಿದ್ಯಾರ್ಥಿಗಳಲ್ಲಿ ಏಕಾಂತದ ಭಾವನೆಗಳನ್ನು ಕಡಿಮೆ ಮಾಡುವುದನ್ನು ಒತ್ತಿ ಹೇಳುತ್ತದೆ (ಡುರ್ಲಕ್, ವೈಸ್ಬರ್ಗ್, ಮತ್ತು ಪಚನ್, 2010).

ಸಹಪಠ್ಯ ಚಟುವಟಿಕೆಗಳು ಕೇವಲ ಶೈಕ್ಷಣಿಕ ಕಲಿಕೆಗೆ ಪೂರಕವಲ್ಲ, ಬದಲಾಗಿ ನಮ್ಮ ವಿದ್ಯಾರ್ಥಿಗಳನ್ನು ಉತ್ತಮವಾಗಿ ಬೆಳೆಸಲು ಅಗತ್ಯವಾಗಿವೆ. ಅವು ವಿದ್ಯಾರ್ಥಿಗಳು ಅಂತರವ್ಯಕ್ತಿ ಸಂಬಂಧಗಳ ಸಂಕೀರ್ಣತೆಗಳನ್ನು ನಿಭಾಯಿಸಲು ಮತ್ತು ವಿವಿಧ ಸಾಮಾಜಿಕ ಪರಿಸರಗಳಲ್ಲಿ ಯಶಸ್ಸು ಗಳಿಸಲು ಅಗತ್ಯವಾದ ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ರಹ್ಮಾನ್ ಮತ್ತು ಇತರರು (2021) ಪ್ರಕಾರ, ಸಹಪಠ್ಯ ಚಟುವಟಿಕೆಗಳು ಸಾಮಾಜಿಕ ಕೌಶಲ್ಯಗಳ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೆಂಬಲಿಸುವ ಪುರಾವೆಗಳು ಶೈಕ್ಷಣಿಕ ಸಂಸ್ಥೆಗಳು ಈ ಕಾರ್ಯಕ್ರಮಗಳನ್ನು ಮುಂದುವರಿಸುವುದು ಮತ್ತು ವಿಸ್ತರಿಸುವುದು ಎಷ್ಟು ಅಗತ್ಯವೆಂದು ಸೂಚಿಸುತ್ತದೆ.

## ಸಹಪಠ್ಯ ಕ್ರಮ ಮತ್ತು ಸಾಮಾಜಿಕ ಕೌಶಲ್ಯಗಳಿಗೆ ಸಂಬಂಧಿಸಿದ ಹಿಂದಿನ ಸಂಶೋಧನೆ

ಶೈಕ್ಷಣಿಕ ಸಂಸ್ಥೆಗಳಲ್ಲಿ ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ಎಂಬುದರ ಮೇಲೆ ಹಲವಾರು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮಗಳನ್ನು ಗುರುತಿಸಿವೆ. ಈ ಅಧ್ಯಯನಗಳ ಸಾರಾಂಶವನ್ನು ಕೆಳಗೆ ನೀಡಲಾಗಿದೆ.

ಸಾಮಾಜಿಕ ಕೌಶಲ್ಯಗಳ ಅಭಿವೃದ್ಧಿಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮವನ್ನು ಕಂಡುಹಿಡಿಯಲು ಮುಹಮ್ಮದ್ ಮತ್ತು ಇತರರು (2012) ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿರುವ ವಿದ್ಯಾರ್ಥಿಗಳನ್ನು ಸಮೀಕ್ಷಿಸಿ, ವಿದ್ಯಾರ್ಥಿಗಳು ಇಂಟರ್ನೆಟ್ ಮತ್ತು ಕ್ರೀಡೆಗಳಲ್ಲಿ ಪ್ರತಿದಿನ 1–2 ಗಂಟೆಗಳ ಕಾಲ ತೊಡಗಿಸಿಕೊಂಡಿದ್ದಾರೆ ಹಾಗೂ ವಿದ್ಯಾರ್ಥಿಗಳು ಕಡಿಮೆ ಸಮಯ ದೂರದರ್ಶನವನ್ನು ನೋಡುತ್ತಾರೆ ಎಂದು ನಿರೂಪಿಸಿದರು. ಹೆಚ್ಚುವರಿಯಾಗಿ, ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಸುಧಾರಿಸುತ್ತವೆ ಎಂದು ಲೇಖಕರು ಸಾಬೀತುಪಡಿಸಿದರು. ಅಂತಿಮವಾಗಿ ಲೇಖಕರು ಪೋಷಕರು ಮತ್ತು ಶಿಕ್ಷಕರಿಗೆ ವಿದ್ಯಾರ್ಥಿಗಳ ಆಸಕ್ತಿಯನ್ನು ಗುರುತಿಸಲು ಮತ್ತು ನಂತರ ಸಾಮಾಜಿಕ ಕೌಶಲ್ಯಗಳು, ಕ್ರೀಡಾ ಮನೋಭಾವ, ನೈತಿಕತೆ ಮತ್ತು ಶಿಸ್ತನ್ನು ಅಭಿವೃದ್ಧಿಪಡಿಸಲು ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಶಿಫಾರಸು ಮಾಡಿದರು. ಇದಲ್ಲದೆ, ಅಬೋಟಾಬಾದ್ ಜಿಲ್ಲೆಯ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮವನ್ನು ಪರಿಶೀಲಿಸಲು, ಜಾಹಿದ್ ಬಶೀರ್ ಮತ್ತು ಶಫ್ಕತ್ ಹುಸೇನ್ (2012) 10 ನೇ ತರಗತಿಯ 200 ವಿದ್ಯಾರ್ಥಿಗಳಿಗೆ ಗಣಿತದ ನಾಲ್ಕು ಪಾಠಗಳು ಮತ್ತು ಇಂಗ್ಲಿಷ್ ನ ನಾಲ್ಕು ಪಾಠಗಳನ್ನು ಒಳಗೊಂಡ ಪರೀಕ್ಷೆಯನ್ನು ನಡೆಸಿದರು. ಮೊದಲನೆಯದಾಗಿ ಲೇಖಕರು ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಗುಂಪು ಮತ್ತು ನಿಯಂತ್ರಣ ಗುಂಪು ಎಂದು ಹೆಸರಿಸಲಾದ ಎರಡು ಸಮಾನ ಗುಂಪುಗಳಾಗಿ (ಟ = 100) ವಿಂಗಡಿಸಿದರು. ಇದಲ್ಲದೆ, ಲೇಖಕರು ಪ್ರಾಯೋಗಿಕ ಗುಂಪಿಗೆ ಆಟಗಳು, ಅಥ್ಲೆಟಿಕ್ಸ್ ಮತ್ತು ಪಿಟಿ (ದೈಹಿಕ ತರಬೇತಿ) ಚರ್ಚೆಗಳು, ನಾಟಕ ಭಾಷಣಗಳು ಮುಂತಾದ ಸಹಪಠ್ಯ ಚಟುವಟಿಕೆಗಳಲ್ಲಿ ಹನ್ನೆರಡು ವಾರಗಳವರೆಗೆ ಪ್ರತಿದಿನ ನಲವತ್ತು ನಿಮಿಷಗಳ ಕಾಲ ತೊಡಗಿಸಿದರು. ಲೇಖಕರು ಪ್ರಾಯೋಗಿಕ ಮತ್ತು ನಿಯಂತ್ರಣ ಗುಂಪುಗಳಿಗೆ ಪೋಸ್ಟ್-ಪರೀಕ್ಷೆಯನ್ನು ನಡೆಸಿದರು ಹಾಗೂ ಪ್ರಾಯೋಗಿಕ ಗುಂಪು ನಿಯಂತ್ರಿತ ಗುಂಪಿಗಿಂತ ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿದೆ ಎಂದು ತೋರಿಸಿದರು.

ಮತ್ತೊಂದು ಅಧ್ಯಯನದಲ್ಲಿ ಖಾನ್ ಮತ್ತು ಇಕ್ಬಾಲ್ (2014) ಪ್ರಾಂಶುಪಾಲರು ಮತ್ತು ಶಿಕ್ಷಕರು ಸಹಪಠ್ಯ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ಹೇಗೆ ಮಾಡುತ್ತಿದ್ದಾರೆ ಮತ್ತು ಶಾಲೆಯ ಸಹಪಠ್ಯ ಕಾರ್ಯಕ್ರಮಗಳು ಶೈಕ್ಷಣಿಕ ಫಲಿತಾಂಶಗಳನ್ನು ಹೇಗೆ ಉತ್ತೇಜಿಸುತ್ತವೆ ಎಂಬ ಹೇಳಿಕೆಯನ್ನು ಬಲವಾಗಿ ತೋರಿಸುತ್ತಾರೆ. ಇದಲ್ಲದೆ, ಹೆಚ್ಚಿನ ವಿದ್ಯಾರ್ಥಿಗಳು ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಸಹಪಠ್ಯ ಚಟುವಟಿಕೆಗಳಿಂದ ಪ್ರಯೋಜನ ಪಡೆಯುತಿದ್ದರೆ ಎಂದು ಗುರುತಿಸಿದ್ದಾರೆ. ಶೈಕ್ಷಣಿಕ ಫಲಿತಾಂಶಗಳನ್ನು ಹೆಚ್ಚಿಸಲು ಮತ್ತು ಅನುಕೂಲಕರ ಕಲಿಕೆಯ ವಾತಾವರಣವನ್ನು ಬೆಳೆಸಲು ಅಧಿಕಾರಿಗಳು ಸಹಪಠ್ಯ ಚಟುವಟಿಕೆಗಳನ್ನು ಜಾರಿಗೆ ತರಬೇಕು ಎಂದು ಶಿಫಾರಸು ಮಾಡಿದ್ದಾರೆ. ಇದಲ್ಲದೆ ರಾಣಿ ಮತ್ತು ಕೇಶ್ವಾಲ್ (2016) ಚಂಡೀಗಢದ ಸರ್ಕಾರಿ ಬೌದ್ಧಿಕ ವಿಕಲಚೇತನರ ಪುನರ್ವಸತಿ ಸಂಸ್ಥೆಯಲ್ಲಿ (ಜಿಆರ್ಐಐಡಿ) 35–49 ರವರೆಗಿನ ಬೌದ್ಧಿಕ ಅಂಗವೈಕಲ್ಯ ಹೊಂದಿರುವ ಮಕ್ಕಳನ್ನು ನೃತ್ಯ, ಕ್ರೀಡೆ ಮತ್ತು ಚಿತ್ರಕಲೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಆಧಾರದ ಮೇಲೆ ಅವರ ಸಾಮಾಜಿಕ ಕೌಶಲ್ಯವನ್ನು ನಿರ್ಣಯಿಸಲು ಸಮೀಕ್ಷೆ ನಡೆಸಿದರು ಮತ್ತು ಸಹಪಠ್ಯ ಚಟುವಟಿಕೆಗಳು ಬೌದ್ಧಿಕ ಅಂಗವೈಕಲ್ಯ ಹೊಂದಿರುವ ಮಕ್ಕಳ ಸಾಮಾಜಿಕ ಕೌಶಲ್ಯಗಳನ್ನು ಸುಧಾರಿಸಿವೆ ಎಂದು ಗುರುತಿಸಿದ್ದಾರೆ. ಹೀಗಾಗಿ ನಿಯಮಿತ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಆನಂದದಾಯಕವಾಗಿರುವ ಸಹಪಠ್ಯ ಚಟುವಟಿಕೆಗಳ ಮೂಲಕ ಸಾಮಾಜಿಕ ಕೌಶಲ್ಯಗಳನ್ನು ಕಲಿಸಲು ಸೈಕೋಮೋಟರ್ ಅಂಶಗಳ ಬಗ್ಗೆ ಗಮನ ಹರಿಸುವಂತೆ ಲೇಖಕರು ಅಧಿಕಾರಿಗಳಿಗೆ ಶಿಫಾರಸು ಮಾಡಿದರು.

ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳ ಸಂವಹನ ಕೌಶಲ್ಯಗಳು ಮತ್ತು ಆತ್ಮವಿಶ್ವಾಸದಂತಹ ಸಾಮಾಜಿಕ ಕೌಶಲ್ಯಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಪ್ರದರ್ಶಿಸಲು ಅಹ್ಮದ್ ಮತ್ತು ಮಂಚ (2016) ಸಂಬಂಧವನ್ನು ಬೆಳೆಸುವುದು, ಸಹಯೋಗ, ತಂಡದ ಕೆಲಸ, ಬದಲಾವಣೆ ನಿರ್ವಹಣೆ, ಸಂವಹನ ಸಂಘರ್ಷ ನಿರ್ವಹಣೆ ಮತ್ತು ನಾಯಕತ್ವದ ಮೇಲೆ ಸಹಪಠ್ಯ ಚಟುವಟಿಕೆಗಳ ಅನುಕೂಲಗಳು, ಸವಾಲುಗಳು, ಮತ್ತು ಮಾನವ

ಬಂಡವಾಳವನ್ನು ವಿವರಿಸಿದರು. ಇದಲ್ಲದೆ, ಲೇಖಕರು ಸಾಮಾಜಿಕ ಕೌಶಲ್ಯಗಳು ಮತ್ತು ಸಾಮಾಜಿಕ ಕೌಶಲ್ಯಗಳ ಮೇಲೆ ಸಹಪಠ್ಯ ಚಟುವಟಿಕೆಗಳ ಪ್ರಭಾವವನ್ನು ವಿವರಿಸಿದರು. ಅಂತಿಮವಾಗಿ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಸುಧಾರಿಸಲು ಶಾಲೆಯಲ್ಲಿ ಉತ್ಸಾಹಭರಿತ ಸಹಪಠ್ಯ ಚಟುವಟಿಕೆಗಳ ವಾತಾವರಣವನ್ನು ರಚಿಸಲು ಅಧಿಕಾರಿಗಳಿಗೆ ಸೂಚಿಸಿದರು. 11 ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮಗಳನ್ನು ಗುರುತಿಸಲು ಸಿಂಗ್ (2017) ಸಹಪಠ್ಯ ಚಟುವಟಿಕೆಗಳಲ್ಲಿದ್ದ 100 ವಿದ್ಯಾರ್ಥಿಗಳನ್ನು ಸಮೀಕ್ಷಿಸಿ, ಗಣಿತ ಮತ್ತು ಸಮಾಜ ವಿಜ್ಞಾನಗಳಲ್ಲಿ ಹುಡುಗರು ಮತ್ತು ಹುಡುಗಿಯರ ಶೈಕ್ಷಣಿಕ ಸಾಧನೆಗಳಲ್ಲಿನ ವ್ಯತ್ಯಾಸವನ್ನು ಕಂಡುಕೊಂಡರು, ಆದರೆ ಭಾಷೆ ಮತ್ತು ವಿಜ್ಞಾನ ವಿಷಯಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದು ಗುರುತಿಸಿದರು. ಇದಲ್ಲದೆ,ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ವ್ಯಕ್ತಿತ್ವ ವಿಕಸನದ ಮೇಲೆ ಸಹಪಠ್ಯ ಚಟುವಟಿಕೆಗಳ ಸಕಾರಾತ್ಮಕ ಪರಿಣಾಮವಿದೆ ಎಂದು ಅವರು ಗುರುತಿಸಿದ್ದಾರೆ. ಅದೇ ರೀತಿ ಯಂತ್ರ ಕಲಿಕೆಯ (ಒಚಿಛಿhiಟಿe ಐeಚಿಡಿಟಿiಟಿg) ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮಗಳನ್ನು ಗುರುತಿಸಲು ರಹಮಾನ್ ಮತ್ತು ಇತರರು (2021) 850 ವಿದ್ಯಾರ್ಥಿಗಳನ್ನು ಸಮೀಕ್ಷಿಸಿ, ಮತ್ತು ಪೈಥಾನ್ ಹಾಗು ಗೂಗಲ್ ಕೊಲಾಬ್ ಬಳಸಿ ಲಾಜಿಸ್ಟಿಕ್ ರಿಗ್ರೆಷನ್ ಬಳಸಿ ಸಹಪಠ್ಯ ಚಟುವಟಿಕೆಗಳು ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯ ನಡುವೆ ಸಕಾರಾತ್ಮಕ ಸಂಬಂಧವನ್ನು ಗುರುತಿಸಿದ್ದಾರೆ. ಇದಲ್ಲದೆ, ಸಹಪಠ್ಯ ಚಟುವಟಿಕೆಗಳಾದ ಪರಸ್ಪರ ಕೌಶಲ್ಯಗಳು, ಸಂವಹನ ಕೌಶಲ್ಯಗಳು, ನಾಯಕತ್ವದ ಕೌಶಲ್ಯಗಳು, ನಿರ್ವಹಣಾ ಕೌಶಲ್ಯಗಳು ಮತ್ತು ತಂಡದ ಕೆಲಸದ ಸಾಮರ್ಥ್ಯಗಳು ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯ ನಡುವೆ ಸಕಾರಾತ್ಮಕ ಸಂಬಂಧವನ್ನು ಲೇಖಕರು ಗುರುತಿಸಿದ್ದಾರೆ.

## ಉದ್ದೇಶಗಳು

- ಸಹಪಠ್ಯ ಚಟುವಟಿಕೆಗಳ ಪರಿಕಲ್ಪನೆ ವಿವರಿಸುವುದು
- ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕೌಶಲ್ಯಗಳ ವೃದ್ಧಿಗೆ ಸಹಪಠ್ಯ ಚಟುವಟಿಕೆಗಳ ಪಾತ್ರವನ್ನು ವಿವರಿಸುವುದು
- ಸಹಪಠ್ಯ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಅಭಿವೃದ್ಧಿಗೆ ಜಾರಿಗೊಳಿಸುಲು ಶಿಫಾರಸುಗಳನ್ನು ನೀಡುವುದು

## ಸಹ ಪಠ್ಯಕ್ರಮ

ಶಾಲೆಗಳಲ್ಲಿ ಪಠ್ಯಚಟುವಟಿಕೆಗಳ ಜೊತೆಯಲ್ಲಿ ಅದಕ್ಕೆ ಪೂರಕವಾಗಿ ಜರುಗುವ ಚಟುವಟಿಕೆಗಳೇ ಸಹಪಠ್ಯ ಚಟುವಟಿಕೆಗಳಾಗಿವೆ. ಸಹಪಠ್ಯ ಚಟುವಟಿಕೆಗಳು ತರಗತಿಯ ಹೊರಗೆ ಮತ್ತು ಒಳಗೆ ಕಲಿಸುವ ಶಿಕ್ಷಣದ ಒಂದು ರೂಪವಾಗಿದೆ. ಮಗುವಿನ ಸಂಪೂರ್ಣ ವ್ಯಕ್ತಿತ್ವದ ಬೆಳವಣಿಗೆಗೆ ನೆರವಾಗುವ ದೈಹಿಕ, ಬೌದ್ಧಿಕ, ನೈತಿಕ, ಸಾಂಸ್ಕೃತಿಕ, ಮನೋರಂಜನೆ ಮುಂತಾದ ಚಟುವಟಿಕೆಗಳೇ ಸಹಪಠ್ಯ ಚಟುವಟಿಕೆಗಳಾಗಿವೆ. ಸಹಪಠ್ಯ ಚಟುವಟಿಕೆಗಳು ತರಗತಿಯಲ್ಲಿ ನಡೆಯುವ ಪಾಠ ಪ್ರವಚನಗಳಿಗಿಂತ ಭಿನ್ನವಾಗಿದ್ದರೂ ಶಾಲೆಯ ಆಡಳಿತ ಮತ್ತು ವ್ಯವಸ್ಥೆಗಳಿಗೆ ಒಳಪಟ್ಟಂತೆ ಅದರ ನಿರ್ದೇಶನದಂತೆ ನಡೆಯುವ ಚಟುವಟಿಕೆಯೇ ಸಹಪಠ್ಯ ಚಟುವಟಿಕೆಗಳಾಗುತ್ತವೆ. ಒಬ್ಬ ವಿದ್ಯಾರ್ಥಿಯು ತನ್ನ ಜೀವನದಲ್ಲಿ ಬರುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳಲು ವಿವಿಧ ಸಾಮರ್ಥ್ಯವನ್ನು ಹೊಂದಿದ್ದರೆ ಮಾತ್ರ ಸಾಧ್ಯ. ಆದ್ದರಿಂದ ಇಂತಹ ಮಾನವ ಸಂಪನ್ಮೂಲದ ಬೆಳವಣಿಗೆಯಲ್ಲಿ ಸಹಪಠ್ಯ ಚಟುವಟಿಕೆಗಳು ಒಂದು ಸಾಧನವಾಗಿದೆ. ಈ ಸಾಧನದ ಮೂಲಕ ವಿದ್ಯಾರ್ಥಿಗಳನ್ನು ಪ್ರಾಥಮಿಕ ಹಂತದಿಂದಲೇ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಪಡಿಸಲು ಸಹ ಪಠ್ಯ ಚಟುವಟಿಕೆಗಳು ಮುಖ್ಯವಾದ ಪಾತ್ರ ವಹಿಸುತ್ತವೆ.

- ಸಹಪಠ್ಯ ಚಟುವಟಿಕೆಗಳ ವ್ಯಾಪ್ತಿಯು ಬಹಳ ವಿಶಾಲವಾದದ್ದು. ಇದು ವಿದ್ಯಾರ್ಥಿಗಳ ನಡುವಿನ ಸಂವಹನ ಕ್ರಿಯೆಯನ್ನು ಬಲಪಡಿಸುತ್ತದೆ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು, ಯಾವುದೇ ಭೇದ ಭಾವವಿಲ್ಲದೆ ಸಮಾನತೆಯಿಂದ, ಸಭ್ಯತೆಯಿಂದ, ಸ್ವಾವಲಂಭಿಗಳಾಗಿ, ಉತ್ತಮ ನಾಗರೀಕರಾಗಿ ಬೆಳೆಯಲು ಸಹಾಯ ಮಾಡುತ್ತದೆ. ಸಹಪಠ್ಯ ಚಟುವಟಿಕೆಗಳು ಬೇಕಾದ ಅಗತ್ಯ ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವುದರ ಮೂಲಕ ಅವರ ಮುಂದಿನ

ಜೀವನಕ್ಕೆ ಭದ್ರ ಬುನಾದಿಯನ್ನು ಹಾಕಿಕೊಡುತ್ತದೆ.

- ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸಾಹಿತ್ಯಿಕ ಮೌಲ್ಯಗಳು, ವೈಜ್ಞಾನಿಕ ಮೌಲ್ಯಗಳು, ನೈತಿಕ ಮೌಲ್ಯಗಳು, ಕಸುಬಿನ–ಕೌಶಲ್ಯದ ಮೌಲ್ಯಗಳು, ಸಮಾಜ ಕಲ್ಯಾಣ ಮೌಲ್ಯಗಳು ಮತ್ತು ಪೌರತ್ವ ತರಭೇತಿ ಮೌಲ್ಯಗಳನ್ನು ಸಂಘಟಿಸಬಹುದಾಗಿದೆ. ಇದು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿವೆ.
- ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸಮಯಪ್ರಜ್ಞೆ, ಸಂಯಮ, ಸಹಕಾರ, ಸಹಬಾಳ್ವೆ, ತಾಳ್ಮೆ, ನಾಯಕತ್ವ, ಸಹಾನುಭೂತಿಯಂತಹ ಹಲವು ಉತ್ತಮ ಗುಣಗಳನ್ನು ಬೆಳೆಸುತ್ತದೆ.
- ಸಹಪಠ್ಯ ಚಟುವಟಿಕೆಗಳಲ್ಲಿರುವ ವೈವಿಧ್ಯಮಯ ಕಾರ್ಯ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಯು ವಿರಾಮ ವೇಳೆಯ ಸಮರ್ಪಕ ಬಳಕೆಯನ್ನು ಕಲಿಯುತ್ತಾನೆ. ಈ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಹುದುಗಿರುವ ಅಗೋಚರ ಪ್ರತಿಭೆಗಳನ್ನು ಹೊರಹೊಮ್ಮಲು ಅವಕಾಶವನ್ನು ಕಲ್ಪಿಸುತ್ತದೆ.
- ಸಹಪಠ್ಯ ಚಟುವಟಿಕೆಗಳಿಂದ ವಿದ್ಯಾರ್ಥಿಯು ಅನೇಕ ಸಾಮಾಜಿಕ ಕೌಶಲ್ಯಗಳ ಜೊತೆಗೆ ಹಲವು ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತಾನೆ. ಇವು ಮುಂದೆ ಆತನು ಉದ್ಯೋಗದಾತನ ನಿರೀಕ್ಷೆಯಂತೆ ಕೌಶಲ್ಯವನ್ನು ಪ್ರದರ್ಶಿಸಿ ಸೂಕ್ತ ಕೆಲಸವನ್ನು ಪಡೆಯಲು ಸಹಾಯಕವಾಗುತ್ತದೆ.

**ಪ್ರಯೋಜನಗಳು**: ವಿದ್ಯಾರ್ಥಿಯು ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಕೆಳಗೆ ಪಟ್ಟಿ ಮಾಡಿರುವ ಎಲ್ಲಾ ಪ್ರಯೋಜನಗಳನ್ನು ಪಡೆಯುತ್ತಾನೆ.

1. **ಸಾಮಾಜಿಕ ಕೌಶಲ್ಯಗಳು**: ಸಹಪಠ್ಯ ಚಟುವಟಿಕೆಗಳ ಮೂಲಕ ಕಲಿಯುವ ಸಾಮಾಜಿಕ ಕೌಶಲ್ಯಗಳು ವ್ಯಕ್ತಿತ್ವ ವಿಕಸನಕ್ಕೆ ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೋಷಕರು ಮತ್ತು ಶಿಕ್ಷಕರ ಮಾರ್ಗದರ್ಶನದ ಜೊತೆಗೆ ವಿದ್ಯಾರ್ಥಿಗಳ ಆಂತರಿಕ ಅಭಿವ್ಯಕ್ತಿತ್ವವೂ ಮುಖ್ಯವಾದದ್ದು. ಆಂತರಿಕ ಅಭಿವ್ಯಕ್ತಿತ್ವವೆಂದರೆ ಸಲಹೆಗಳನ್ನು ಮತ್ತು ಟೀಕೆಗಳನ್ನು ಸಮನಾಗಿ ಸ್ವೀಕರಿಸಿ ತಮ್ಮ ವ್ಯಕ್ತಿತ್ವವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವುದು. ಈ ಅಭಿವ್ಯಕ್ತಿತ್ವವನ್ನು ವಿದ್ಯಾರ್ಥಿಯು ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಕಲಿಯುತ್ತಾನೆ.
2. **ಸಂಬಂಧವನ್ನು ನಿರ್ಮಿಸುವುದು**: ಸಂಬಂಧವನ್ನು ನಿರ್ಮಿಸುವಲ್ಲಿನ ದಕ್ಷತೆ ಎಂದರೆ ಸಾಮಾಜಿಕ ಸಂಬಂಧವನ್ನು ರಚಿಸುವ, ನಿರ್ಮಿಸುವ ಮತ್ತು ನಿರ್ವಹಿಸುವ ಒಂದು ಸಾಮರ್ಥ್ಯ. ಉತ್ತಮ ಗೆಳೆಯನ ಆಯ್ಕೆಯಿಂದ ಹಿಡಿದು ಪೋಷಕರು, ಶಿಕ್ಷಕರು ಮತ್ತು ಪರಿಚಿತ ಮತ್ತು ಅಪರಿಚಿತರೊಡನೆ ನಡೆದುಕೊಳ್ಳುವ ರೀತಿಯೂ ಒಂದು ದಕ್ಷತೆಯೇ. ಈ ಕೌಶಲ್ಯವನ್ನು ಹೊಂದಿರುವ ವ್ಯಕ್ತಿಯು ಹೆಚ್ಚು ಆತ್ಮವಿಶ್ವಾಸದಿಂದ ಪ್ರಜ್ಞಾವಂತ, ಗೌರವಾನ್ವಿತ ವ್ಯಕ್ತಿಯಾಗಿ ಉತ್ತಮ ಜೀವನ ನಡೆಸುತ್ತಾನೆ.
3. **ಸಹಯೋಗ**: ಸಹಯೋಗವು ಇತರರೊಂದಿಗೆ ಕೆಲಸ ಮಾಡುವ ದಕ್ಷತೆಯಾಗಿದೆ. ಇದು ಸಂಸ್ಥೆಯ ಧ್ಯೇಯ ಮತ್ತು ದೃಷ್ಟಿಕೋನದ ಆಧಾರದ ಮೇಲೆ ಗುರಿಗಳನ್ನು ಸಾಧಿಸಲು ಸಹಾಯ ಮಾಡುತ್ತದೆ. ಈ ಗುರಿ ಸಾಧನೆಗೆ ಬೇಕಾಗಿರುವ ಮುಖ್ಯ ಲಕ್ಷಣಗಳು ಪರಸ್ಪರ ಸಹಕಾರ, ಅವಲಂಬನೆ ಮತ್ತು ಜ್ಞಾನವನ್ನು ಹಂಚಿಕೊಳ್ಳುವ ಗುಣ.
4. **ತಂಡದ ಕೆಲಸ**: ಈ ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಯು ಗೌರವಿಸುವ, ಸಹಕರಿಸುವ ಮತ್ತು ಇತರರ ಸಾಮರ್ಥ್ಯವನ್ನು ಗುರುತಿಸುವ ಗುಣವನ್ನು ಹೊಂದಿರುತ್ತಾನೆ. ತಂಡದ ಬದ್ಧತೆಯನ್ನು ಕಾಪಾಡುತ್ತಾನೆ ಮತ್ತು ತಾನು ಗಳಿಸಿದ ಮೆಚ್ಚುಗೆಯನ್ನು ಇತರ ಸದಸ್ಯರಲ್ಲಿ ಹಂಚಿಕೊಳ್ಳಲು ಸದಾ ಸಿದ್ಧನಿರುತ್ತಾನೆ ಹಾಗೂ ಈ ವ್ಯಕ್ತಿಯು ಪ್ರತಿ ನಿಯೋಜಿತ ಕಾರ್ಯದಲ್ಲಿ ಆತ್ಮವಿಶ್ವಾಸದಿಂದ ತನ್ನನ್ನು ತಾನು ತೊಡಗಿಸಿಕೊಂಡು ಸಹಕಾರ ನಡವಳಿಕೆಯನ್ನು ವ್ಯಕ್ತಪಡಿಸುತ್ತಾನೆ ಮತ್ತು ತಂಡದ ಸದಸ್ಯರು ಸಕ್ರಿಯವಾಗಿ ಭಾಗವಹಿಸಲು ಅವರನ್ನು ಹುರಿದುಂಬಿಸುತ್ತಾನೆ.
5. **ಬದಲಾವಣೆ ಮಾಡಲು ಸಾಧ್ಯವಾಗುತ್ತದೆ**: ಸೂಕ್ತ ಸಮಯದಲ್ಲಿ ಬದಲಾವಣೆಗಳನ್ನು

ತರುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು ಮುಂದೆ ತಮ್ಮನ್ನು ತಾವು ಹಲವು ಅಭಿವೃದ್ಧಿಶೀಲ ಕಾರ್ಯಗಳಲ್ಲಿ, ಪ್ರಗತಿಪರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಮತ್ತು ಅಭಿವೃದ್ಧಿಗೆ ಪೂರಕವಾಗುವಂತಹ ಹಲವು ಅಗತ್ಯ ಬದಲಾವಣೆಗಳನ್ನು ಸೂಕ್ತ ಸಮಯದಲ್ಲಿ ಎದುರಾಗುವ ಎಲ್ಲಾ ಸವಾಲುಗಳನ್ನು ಎದುರಿಸಿ ಜಾರಿಗೊಳಿಸುತ್ತಾರೆ. ವಿದ್ಯಾರ್ಥಿ ದೆಸೆಯಲ್ಲಿ ವಿದ್ಯಾರ್ಥಿಯು ತನ್ನ ಸ್ನೇಹಿತನು ಮಾಡುವ ತಪ್ಪನ್ನು ನಯವಾಗಿ ತಿದ್ದುವ, ಆತನಲ್ಲಿ ಸೂಕ್ತ ಬದಲಾವಣೆಯನ್ನು ತರುವ ಧೈರ್ಯವನ್ನು ಹೊಂದಿರುತ್ತಾನೆ. ಎರಡು ಗುಂಪುಗಳ ನಡುವೆಯೇ ಆಗಲಿ, ಇಬ್ಬರ ವ್ಯಕ್ತಿಗಳ ನಡುವೆಯೇ ಆಗಲಿ ಬರುವ ಸಮಸ್ಯೆಗಳನ್ನು ಸಂಯಮದಿಂದ ಕೇಳಿ ಸೂಕ್ತ ಪರಿಹಾರ ಕೊಡುವ ಮತ್ತು ಅವರ ಮೇಲೆ ಉತ್ತಮ ಪ್ರಭಾವ ಬೀರುವ ಗುಣವನ್ನು ಹೊಂದಿರುತ್ತಾನೆ.

6. **ಸಂವಹನ**: ಸಂವಹನ ಕೌಶಲ್ಯ ಹೊಂದಿರುವ ವಿದ್ಯಾರ್ಥಿಗಳು ಮುಖ್ಯವಾಗಿ ಮುಕ್ತವಾಗಿ ಕೇಳುತ್ತಾರೆ ಮತ್ತು ಮನವೊಲಿಸುವ ರೀತಿಯಲ್ಲಿ ವಿಷಯವನ್ನು ತಿಳಿಸುತ್ತಾರೆ. ಅವರು ಸಂದೇಶದ ಆಧಾರದ ಮೇಲೆ ತಮ್ಮನ್ನು ತಾವು ಪ್ರಾಮಾಣಿಕ ಸಂವಹನ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಈ ಕೌಶಲ್ಯವನ್ನು ಹೊಂದಿರುವ ವ್ಯಕ್ತಿಯು ಇತರ ವ್ಯಕ್ತಿಯ ಅಸಮರ್ಪಕ ಕ್ರಿಯೆಯನ್ನು ನಯವಾಗಿ ಖಂಡಿಸುತ್ತಾನೆ ಮತ್ತು ಇಂತಹ ವ್ಯಕ್ತಿಯು ಎಲ್ಲಾ ರೀತಿಯ ಸುದ್ದಿಗಳನ್ನು ಶಾಂತವಾಗಿ ಸ್ವೀಕರಿಸುತ್ತಾನೆ.

7. **ಸಂಘರ್ಷ ನಿರ್ವಹಣೆ**: ಸಂಘರ್ಷವನ್ನು ನಿರ್ವಹಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು ವಿವಾದಗಳನ್ನು ಮಾತುಕತೆಯಿಂದ ಪರಿಹರಿಸಲು ಸಾಧ್ಯವಾಗುತ್ತದೆ. ಸಂಘರ್ಷವನ್ನು ನಿರ್ವಹಿಸುವ ಕೌಶಲ್ಯಗಳು ಇತರರನ್ನು ನಿಭಾಯಿಸಲು ಮತ್ತು ತೀವ್ರವಾದ ಪರಿಸ್ಥಿತಿಯನ್ನು ಪ್ರಕಾಶಮಾನವಾಗಿ ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಜೊತೆಗೆ, ಅವರು ವಾತಾವರಣದಲ್ಲಿ ಸಂಭಾವ್ಯ ಘರ್ಷಣೆಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ. ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ನಿಭಾಯಿಸುತ್ತಾರೆ ಮತ್ತು ಅದನ್ನು ಸರಾಗಗೊಳಿಸುವಲ್ಲಿ ಸಹಾಯ ಮಾಡುತ್ತಾರೆ. ಚರ್ಚೆ ಮತ್ತು ಮುಕ್ತ ಚರ್ಚೆಗೆ ಉತ್ತೇಜನ ನೀಡುವ ಅವರ ವರ್ತನೆಗಳು ಹಲವು ಪರಿಸ್ಥಿತಿಯಲ್ಲಿ ಸಮಸ್ಯೆಗಳನ್ನು ಸರಿಹೊಂದಿಸಲು ಕಾರಣವಾಗುತ್ತದೆ.

ಸಂಘರ್ಷ ನಿರ್ವಹಣೆಯಲ್ಲಿನ ದಕ್ಷತೆಯು ಒಬ್ಬರ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುತ್ತದೆ. ಅವರು ಸಂಘರ್ಷದಲ್ಲಿ ಶಾಂತಿಯನ್ನು ಕಾಪಾಡುತ್ತಾರೆ ಮಾತ್ರವಲ್ಲದೆ ಸಮಸ್ಯೆ ಅಥವಾ ಸಮಸ್ಯೆಯ ಪರಿಣಾಮವಾಗಿ ಅವರ ಸಹೋದ್ಯೋಗಿಗಳ ನಡುವೆ ಸಂಭಾವ್ಯ ಘರ್ಷಣೆಗಳನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಈ ರೀತಿಯಾಗಿ ಯಾವುದೇ ಸಂಘರ್ಷವನ್ನು ತಪ್ಪಿಸಬಹುದು ಮತ್ತು ವಿದ್ಯಾರ್ಥಿಗಳ ನಡುವೆ ಸಾಮರಸ್ಯದ ಸಂಬಂಧವನ್ನು ಇರಿಸಬಹುದು.

8. **ನಾಯಕತ್ವ**: ನಾಯಕನು ಇತರ ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ಸ್ಫೂರ್ತಿದಾಯಕ ಮತ್ತು ಮಾರ್ಗದರ್ಶನ ನೀಡುವ ಪಾತ್ರವನ್ನು ಹೊಂದಿರುತ್ತಾನೆ. ಒಬ್ಬ ಉತ್ತಮ ನಾಯಕನು ಒಟ್ಟಾಗಿ ರೂಪಿಸಲಾದ ಧ್ಯೇಯ ಮತ್ತು ದೃಷ್ಟಿಯನ್ನು ಸಾಧಿಸಲು ಸದಸ್ಯರಲ್ಲಿ ಉತ್ಸಾಹವನ್ನು ಉತ್ತೇಜಿಸುತ್ತಾನೆ ಮತ್ತು ಹೆಚ್ಚಿಸುತ್ತಾನೆ. ಹೆಚ್ಚಿನ ಭಾವನಾತ್ಮಕ ಬುದ್ಧಿವಂತಿಕೆಯನ್ನು ಹೊಂದಿರುವ ವ್ಯಕ್ತಿಯು ಅಗತ್ಯವಿದ್ದಾಗ ಮುನ್ನಡೆಸಲು ಮುನ್ನುಡಿಯ ಹೆಜ್ಜೆ ಹಾಕುತ್ತಾನೆ ಮತ್ತು ಇತರರಿಗೆ ಮಾರ್ಗದರ್ಶನ ನೀಡುತ್ತಾನೆ. ಒಬ್ಬ ಉತ್ತಮ ನಾಯಕನು ಉನ್ನತ ಗುಣಲಕ್ಷಣಗಳನ್ನು ಹೊಂದಿದ್ದಾನೆ. ಅದು ಅವರನ್ನು ಇತರ ಸಂಸ್ಥೆಯ ಸದಸ್ಯರಿಂದ ಗೌರವಿಸುವಂತೆ ಮಾಡುತ್ತದೆ. ನಾಯಕನ ಯಾವುದೇ ಸೂಚನೆ ಮತ್ತು ನಿರ್ಧಾರವನ್ನು ಅಧೀನ ಅಧಿಕಾರಿಗಳು ಯಾವುದೇ ಆಕ್ಷೇಪಣೆ ಅಥವಾ ಅನುಮಾನವಿಲ್ಲದೆ ಅನುಸರಿಸುತ್ತಾರೆ. ಹೆಚ್ಚುವರಿಯಾಗಿ ಒಬ್ಬ ಸಮರ್ಥ ನಾಯಕನು ವಿದ್ಯಾವಂತ ನಾಯಕನಾಗಿದ್ದು ಗುರಿ, ಗುರಿ–ವಿಧಾನ ಮತ್ತು ಅದರ ಅಧೀನ ಅಧಿಕಾರಿಗಳ ಅವಶ್ಯಕತೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಹೊಂದಿರುತ್ತಾನೆ. ಒಬ್ಬ ನಾಯಕನು ಗುರಿ ಮತ್ತು ನಿಗದಿತ ಗುರಿಗೆ ಅನುಗುಣವಾಗಿ ನಿರ್ಧಾರವನ್ನು

ತೆಗೆದುಕೊಳ್ಳುತ್ತಾನೆ. ಅವನು ಇತರ ವ್ಯಕ್ತಿಗಳೊಂದಿಗೆ ಉತ್ತಮವಾಗಿ ಸಂವಹನ ನಡೆಸಲು ಶಕ್ತನಾಗಿರುತ್ತಾನೆ.

## ಮಾನವ ಬಂಡವಾಳ ಮತ್ತು ಸಹಪಠ್ಯ ಚಟುವಟಿಕೆಗಳು

ಈ ದೇಶದ ಶಿಕ್ಷಣದ ಅಭಿವೃದ್ಧಿಯು ಬಹಳ ಹಿಂದಿನಿಂದಲೂ ನಡೆಯುತ್ತಿದೆ. ಅದು ಕಾಲ ಬದಲಾದಂತೆ ಹಲವು ಸವಾಲುಗಳಿಗೆ ಅನುಗುಣವಾಗಿ ಬದಲಾಗುತ್ತಿದೆ. ಸಹಪಠ್ಯ ಚಟುವಟಿಕೆಗಳು ದೇಶದ ಭವಿಷ್ಯವನ್ನು ಹೆಚ್ಚಿಸಲು ಸಾಧ್ಯವಾಗುವ ಮಾನವ ಬಂಡವಾಳವನ್ನು ಅಭಿವೃದ್ಧಿಪಡಿಸುವಲ್ಲಿ ಸೂಕ್ತ ಮತ್ತು ನಿಕಟ ಸಂಬಂಧವನ್ನು ಹೊಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ನಡೆಸುವ ಪ್ರತಿಯೊಂದು ಚಟುವಟಿಕೆಯೂ ವಿದ್ಯಾರ್ಥಿಯ ಆಲೋಚನಾ ಮಟ್ಟಕ್ಕೆ ಸೂಕ್ತವಾಗಿರುವಂತೆ ಆತನನ್ನು ಮುಂಬರುವ ಸಮಸ್ಯೆಗಳನ್ನು ಎದುರಿಸಲು ಪ್ರಬುದ್ಧನಾಗುವಂತೆ ಮತ್ತು ಜವಾಬ್ದಾರಿ ನಾಗರೀಕನಾಗುವಂತೆ ರೂಪಿಸುವಲ್ಲಿ ಕಾರ್ಯನಿರ್ವಹಿಸಸುತ್ತದೆ.

ಮಾನವ ಬಂಡವಾಳವನ್ನು ಅಭಿವೃದ್ಧಿ ಪಡಿಸುವಲ್ಲಿ ಶಿಕ್ಷಣವು ಮುಖ್ಯವಾಗಿ ಸಹಪಠ್ಯ ಚಟುವಟಿಕೆಗಳು ಮುಖ್ಯ ಪಾತ್ರವನ್ನು ವಹಿಸುತ್ತವೆ. ಇಂದಿನ ಶತಮಾನಕ್ಕೆ ಬೇಕಾಗಿರುವ ನೈತಿಕ ಸಮಗ್ರತೆಗಳನ್ನು ಹೊಂದಿರುವ ಸಮರ್ಥ ಉತ್ತಮ ಮೌಲ್ಯ ಮತ್ತು ತಿಳುವಳಿಕೆ ಹೊಂದಿರುವ ಪ್ರಬುದ್ಧ ವ್ಯಕ್ತಿಯನ್ನು ರೂಪಿಸಲು ಔಪಚಾರಿಕ ಶಿಕ್ಷಣದ ಜೊತೆಗೆ ತರಗತಿಯ ಹೊರಗಿನ ಸೂಕ್ತ ಪ್ರಯೋಜನಕಾರಿ ಚಟುವಟಿಕೆಗಳ ಮೂಲಕ ಕಲಿಯುವ ವಿದ್ಯೆಯು ಮುಖ್ಯವಾಗುತ್ತದೆ. ಬಿಡುವಿನ ಸಮಯದಲ್ಲಿ ನಡೆಸುವ ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಕೌಶಲ್ಯ, ಸೃಜನಶೀಲತೆ, ನವೀನತೆ, ನೈತಿಕತೆ ಮತ್ತು ಸಮಗ್ರತೆಯನ್ನು ಬೆಳೆಸಿ ನೈಜ ಪ್ರಪಂಚವನ್ನು ಎದುರಿಸಲು ಸಹಾಯ ಮಾಡುತ್ತವೆ.

## ಸಹ-ಪಠ್ಯಕ್ರಮ ಮತ್ತು ಸಾಮಾಜಿಕ ಕೌಶಲ್ಯಗಳ ಕಡೆಗೆ ಅದರ ಪ್ರಭಾವ

ಸಹ-ಪಠ್ಯಕ್ರಮವು ಕೆಲವು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಅದು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಅವಕಾಶಗಳನ್ನು ಒದಗಿಸುತ್ತದೆ. ಇದು ವಿದ್ಯಾರ್ಥಿಗಳ ನಡುವಿನ ಸಂವಹನವನ್ನು ಬಲಪಡಿಸುತ್ತದೆ ಮತ್ತು ವಿದ್ಯಾರ್ಥಿಗಳ ಸಂವಹನ ಕೌಶಲ್ಯಗಳನ್ನು ನಿರ್ಮಿಸುತ್ತದೆ. ಸಹ-ಪಠ್ಯಕ್ರಮದ ನಿಜವಾದ ಕಾರ್ಯವು ವಿದ್ಯಾರ್ಥಿಗಳ ನಡುವಿನ ಸಂವಹನ ಮತ್ತು ಸಂವಹನವನ್ನು ವರ್ಧಿಸುವುದು ಮತ್ತು ಬಲಪಡಿಸುವುದು. ಸಹ-ಪಠ್ಯ ತರಗತಿಯ ಹೊರಗಿನ ಕಲಿಕೆಯ ವಾತಾವರಣವು ವ್ಯಕ್ತಿಯ ನಡವಳಿಕೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಪಾತ್ರವನ್ನು ವಹಿಸುತ್ತದೆ ಮತ್ತು ವಿದ್ಯಾರ್ಥಿಗಳ ಸಾಮಾಜಿಕ ಕೌಶಲ್ಯಗಳ ರಚನೆಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಸಹ-ಪಠ್ಯ ಈ ಹೇಳಿಕೆಯನ್ನು ಬ್ರೋನ್ಫೆನ್ ಬ್ರೆನ್ನರ್ ಪರಿಸರ ಸಿದ್ಧಾಂತದಲ್ಲಿ (2007) ಬೆಂಬಲಿಸಲಾಗಿದೆ, ಇದರ ಪ್ರಕಾರ ಸಹ-ಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳ ಸಾಮಾಜಿಕ ಕೌಶಲ್ಯಗಳ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳುತ್ತದೆ. ಅವರ ಪ್ರಕಾರ, ಮಕ್ಕಳ ಬೆಳವಣಿಗೆಯು ಮಕ್ಕಳೊಂದಿಗೆ ನೈಸರ್ಗಿಕ ಪರಿಸರದ ನಡುವಿನ ಪರಸ್ಪರ ಕ್ರಿಯೆಯ ಪರಿಣಾಮವಾಗಿದೆ. ಮಕ್ಕಳ ಬೆಳವಣಿಗೆಯು ಮಕ್ಕಳ ಮೇಲೆ ಪರಿಸರದ ಪ್ರಭಾವ ಮತ್ತು ಪರಿಸರದ ಕಡೆಗೆ ಮಕ್ಕಳ ನಡವಳಿಕೆ, ಈ ಎರಡು ಗುಣಲಕ್ಷಣಗಳನ್ನು ಹೊಂದಿದೆ.

ಸಾಮಾಜಿಕ ಕೌಶಲ್ಯವು ಬುದ್ಧಿವಂತಿಕೆಯ ಒಂದು ಅಂಶವಾಗಿದೆ. ಇದು ಯಾವುದೇ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಶ್ರೇಷ್ಠತೆಯನ್ನು ವ್ಯಾಖ್ಯಾನಿಸುತ್ತದೆ. ಒಬ್ಬ ವ್ಯಕ್ತಿಯು ಅತ್ಯುತ್ತಮವಾಗಲು ಕೇವಲ ಬೌದ್ಧಿಕ ಬುದ್ಧಿವಂತಿಕೆ ಸಾಕಾಗುವುದಿಲ್ಲ. ಸಹಪಠ್ಯ ಚಟುವಟಿಕೆಗಳು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಸಂವಹನ ನಡೆಸುವ ಮೂಲಕ ದೈನಂದಿನ ಜೀವನದಲ್ಲಿ ಸಾಮಾಜಿಕ ಕೌಶಲ್ಯಗಳನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಇದು ಸವಾಲನ್ನು ಸ್ವೀಕರಿಸುವಲ್ಲಿ ಧೈರ್ಯಶಾಲಿಯಾಗಿರಲು ಮತ್ತು ಅವರ ಗುಪ್ತ ಪ್ರತಿಭೆಯನ್ನು ಸುಲಭವಾಗಿ ಬಹಿರಂಗ ಪಡಿಸಲು ಸಹಾಯ ಮಾಡುತ್ತದೆ. ಸುತ್ತಮುತ್ತಲಿನ ಪರಿಸರದೊಂದಿಗೆ ಸಂವಹನ ನಡೆಸಲು ಮತ್ತು ಸಂಪರ್ಕಿಸಲು ಅವರಿಗೆ ಸಾಮಾಜಿಕ ಕೌಶಲ್ಯಗಳ ಸಾಮರ್ಥ್ಯದ ಅಗತ್ಯವಿದೆ. ಪಠ್ಯೇತರ ಚಟುವಟಿಕೆಗಳು ಪ್ರಮುಖವಾಗಿವೆ, ಏಕೆಂದರೆ ಇದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪೂರೈಸುವಲ್ಲಿ ಪ್ರಮುಖ ಮಾನದಂಡವಾಗಿ ಕಾರ್ಯನಿರ್ವಹಿಸುತ್ತದೆ. ಇದು ವಿವಿಧ

ಜನಾಂಗಗಳ ವಿದ್ಯಾರ್ಥಿಗಳ ನಡುವೆ ಏಕತೆಯಾಗಿದೆ. ಪಠ್ಯೇತರ ಚಟುವಟಿಕೆಗಳು ಸೇವೆ, ಸಹಕಾರ ಮತ್ತು ಪರಸ್ಪರ ಸಹಾಯ ಮಾಡುವ ಮನೋಭಾವವನ್ನು ಉತ್ತೇಜಿಸಲು ಸಮರ್ಥವಾಗಿವೆ. ಇದು ಸಾಮರಸ್ಯದ ಸಮಾಜವನ್ನು ಸ್ಥಾಪಿಸುವಲ್ಲಿ ಪ್ರಮುಖ ಅಂಶಗಳಾಗಿವೆ. ಸಹಪಠ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ವಿದ್ಯಾರ್ಥಿಗಳು ಕಡಿಮೆ ಕ್ರಿಯಾಶೀಲರಾಗಿರುವ ವಿದ್ಯಾರ್ಥಿಗಳಿಗಿಂತ ಹೆಚ್ಚು ಶಿಸ್ತು, ಸಂಯಮ, ಕಾರ್ಯತತ್ಪರತೆಯನ್ನು ಹೊಂದಿರುತ್ತಾರೆ. ಇಂತಹ ಸಕ್ಷಮ ವಿದ್ಯಾರ್ಥಿಗಳು ಯಾವುದೇ ಅಪರಾಧ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲ ಮತ್ತು ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಬಿಡುವುದಿಲ್ಲ.

## ಸವಾಲುಗಳು ಮತ್ತು ಅಡೆತಡೆಗಳು

ಸಹಪಠ್ಯ ಚಟುವಟಿಕೆಯಲ್ಲಿ ಹೆಚ್ಚು ಸಮಯವನ್ನು ಕಳೆಯುವುದರಿಂದ ಸ್ವಲ್ಪ ಮಟ್ಟಿಗೆ ವಿದ್ಯಾರ್ಥಿಯು ತನ್ನ ಮೂಲಶಿಕ್ಷಣವನ್ನು ನಿರ್ಲಕ್ಷಿಸುವ ಸಾಧ್ಯತೆ ಇದೆ. ಸೂಕ್ತ ಸಮಯ ಪಾಲನೆಯಿಲ್ಲದಿರುವುದು ಮತ್ತು ಆಯಾಸದಿಂದ ವಿದ್ಯಾರ್ಥಿಯು ತರಗತಿಹಲ್ಲಿ ಹೆಚ್ಚು ಗಮನ ಹರಿಸಲು ಸಾಧ್ಯವಾಗದಿರಬಹುದು. ಇದಲ್ಲದೆ ಶಾಲೆಯಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಹಾಜರಾಗಬೇಕು ಎಂದು ಪೋಷಕರಿಗೆ ಮೋಸ ಮಾಡುವ ವಿದ್ಯಾರ್ಥಿಗಳೂ ಇದ್ದಾರೆ. ಸಹಪಠ್ಯ ಚಟುವಟಿಕೆಗಳ ಹೆಸರಿನಲ್ಲಿ ಹ್ಯಾಂಗ್ ಔಟ್ ಮಾಡುವ, ಸೈಬರ್ ಕೆಫೆಗಳಲ್ಲಿ ಕಾಲಕಳೆಯುವ ವಿದ್ಯಾರ್ಥಿಗಳೂ ಇದ್ದಾರೆ, ಮತ್ತು ಕೆಲವರು ಸಹಪಠ್ಯ ಚಟುವಟಿಕೆಯಷ್ಟು ಪಠ್ಯಕ್ರಮಕ್ಕೆ ಆಸಕ್ತಿ ಕೊಡದೆ ಹಿಂದೆ ಉಳಿಯುವವರೂ ಇದ್ದಾರೆ. ಆದ್ದರಿಂದ ಪಠ್ಯಕ್ರಮಕ್ಕೂ ಸಹಪಠ್ಯ ಚಟುವಟಿಕೆಗಳಿಗೂ ಸೂಕ್ತ ಸಮತೋಲನ ಅತ್ಯಗತ್ಯ.

ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಲ್ಲಿ ಪೋಷಕರು ಪ್ರಮುಖ ಪಾತ್ರವಹಿಸುತ್ತಾರೆ. ಮುಖ್ಯವಾಗಿ ಪೋಷಕರು ತಮ್ಮ ಮಕ್ಕಳನ್ನು ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದಿಲ್ಲ. ಇದರೊಂದಿಗೆ ಸಹಪಠ್ಯ ಚಟುವಟಿಕೆಗಳಲ್ಲಿ ಶಿಕ್ಷಕರಲ್ಲಿ ಕೌಶಲ್ಯದ ಕೊರತೆಯಿರುವುದೂ ಮತ್ತೊಂದು ಮುಖ್ಯ ಕಾರಣ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ವಿಫಲರಾಗುತ್ತಾರೆ. ಸೌಲಭ್ಯಗಳು ಮತ್ತು ಸಲಕರಣೆಗಳ ಕೊರತೆಯೂ ಮತ್ತೊಂದು ದೊಡ್ಡ ಸಮಸ್ಯೆ. ಇಲ್ಲಿ ಮತ್ತೊಂದು ಕಾರಣವನ್ನು ಉಲ್ಲೇಖಿಸಬಹುದು, ಸಹಪಠ್ಯ ಚಟುವಟಿಕೆಗಳು ಶೈಕ್ಷಣಿಕವಲ್ಲದವು ಮತ್ತು ಈ ಚಟುವಟಿಕೆಗಳನ್ನು ಶೈಕ್ಷಣಿಕ ಆಧಾರಿತ ಪಠ್ಯಕ್ರಮದಂತೆ ರೇಟ್ (ಮೌಲ್ಯ) ಮಾಡಲು ಆಗುವುದಿಲ್ಲ, ಅಥವಾ ಶ್ರೇಣೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಪೋಷಕರು ಈ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ಕೊಡುವುದಿಲ್ಲ. ಈ ಕಾರಣದಿಂದಾಗಿ ಹೆಚ್ಚಿನ ಪೋಷಕರು ತಮ್ಮ ಮಕ್ಕಳನ್ನು ಸಹಪಠ್ಯ ಚಟುವಟಿಕೆಗಳ ಬದಲಾಗಿ ಹೆಚ್ಚುವರಿ ತರಗತಿಗಳಿಗೆ, ನೃತ್ಯ ಸಂಗೀತದಂತಹ ಹಲವು ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ. ಕಾರ್ಟನ್ (2021) ರವರ ಅಧ್ಯಯನವು ಪೋಷಕರು ಕೇವಲ ಶೈಕ್ಷಣಿಕ ವಿಷಯಕ್ಕೆ ಹೆಚ್ಚು ಗಮನ ಕೊಟ್ಟು ಸಹಪಠ್ಯ ಚಟುವಟಿಕೆಗಳಿಗೆ ಕಡಿಮೆ ಪ್ರಾಮುಖ್ಯತೆ ಕೊಡುತ್ತಾರೆ ಎಂಬುದನ್ನು ತೋರಿಸುತ್ತದೆ.

ಮತ್ತೊಂದು ದೃಷ್ಟಿಕೋನದಿಂದ ಹೇಳುವುದಾದರೆ, ಸಹಪಠ್ಯ ಚಟುವಟಿಕೆಗಳ ಅನುಷ್ಠಾನದಲ್ಲಿ ಕೆಲವು ಅಂಶಗಳ ಕೊರತೆಯೂ ಇದೆ. ಶಿಕ್ಷಕರುಗಳು ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಸಹಪಠ್ಯ ಚಟುವಟಿಕೆಗಳ ಬಗ್ಗೆ ಚಿಂತಿಸುವುದಿಲ್ಲ. ಕೌಶಲ್ಯದ ಕೊರತೆಯಿಂದಾಗಿ ಸಹಪಠ್ಯ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಶಿಕ್ಷಕರು ಅತೃಪ್ತಿಕರ ಮಟ್ಟದಲ್ಲಿಯೇ ಇದ್ದಾರೆ. ಸಾಮಾಜಿಕ ಸೇವೆಗಳಲ್ಲಿನ ಕೌಶಲ್ಯಗಳ ಕೊರತೆಯ ಹೊರತಾಗಿ ಚಟುವಟಿಕೆಗಳ ಸ್ಪಷ್ಟ ಯೋಜನೆಗೆ ಆಧಾರವಾಗಿರುವ ಮಾರ್ಗಸೂಚಿಗಳನ್ನು ಶಿಕ್ಷಕರುಗಳು ಅರ್ಥಮಾಡಿಕೊಳ್ಳದಿರುವುದು ಇದಕ್ಕೆ ಕಾರಣವಾಗಿರಬಹುದು.

## ಸಲಹೆಗಳು

ಶಾಲೆಯು ಸಹಪಠ್ಯ ಚಟುವಟಿಕೆಗಳ ಬಗ್ಗೆ ಶಾಲಾ ಸಮುದಾಯಗಳ ಋಣಾತ್ಮಕ ಗ್ರಹಿಕೆಯನ್ನು ಬದಲಾಯಿಸಬೇಕಾಗಿತ್ತು. ಸಹಪಠ್ಯ ಚಟುವಟಿಕೆಗಳ ಸರ್ಕಾರದ ನೈಜ ನೀತಿಯ ಬಗ್ಗೆ ಎಲ್ಲಾ ಶಾಲಾ ಸಮುದಾಯಕ್ಕೆ (ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಮತ್ತು ಸ್ಥಳೀಯ ಸಮುದಾಯಗಳು) ಜಾಗೃತಿ ಮೂಡಿಸುವುದು

ಮತ್ತು ಮನವರಿಕೆ ಮಾಡುವುದು ಶಿಕ್ಷಕರ ಪಾತ್ರವಾಗಿದೆ. ಸಹಪಠ್ಯ ಚಟುವಟಿಕೆಗಳು ಅನಗತ್ಯ ಚಟುವಟಿಕೆಗಳು ಎಂಬ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಬೇಕು ಮತ್ತು ಹೆಚ್ಚಿನ ಗಮನವನ್ನು ನೀಡಬೇಕು. ಈ ಚಟುವಟಿಕೆಯು 'ಬೌದ್ಧಿಕ ವೈವಿಧ್ಯತೆ' ಮತ್ತು 'ಬೌದ್ಧಿಕ ಭಾವನೆ'ಯ ಬೆಳವಣಿಗೆಯನ್ನು ಒಳಗೊಂಡಂತೆ ಒಟ್ಟಾರೆಯಾಗಿ ಮಾನವೀಯತೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವ ಯೋಜಿತ ಮತ್ತು ವ್ಯವಸ್ಥಿತ ಚಟುವಟಿಕೆ ಮತ್ತು ಪ್ರಮುಖ ಚಟುವಟಿಕೆ ಎಂಬ ಶಾಲಾ ಸಮುದಾಯದ ಗ್ರಹಿಕೆ ಮತ್ತು ಮನಸ್ಥಿತಿಯನ್ನು ಬದಲಾಯಿಸಲು ಶಾಲೆಯು ಶಕ್ತವಾಗಿರಬೇಕು. ಅದೇ ಸಮಯದಲ್ಲಿ ಈ ಚಟುವಟಿಕೆಗಳು ವಿದ್ಯಾರ್ಥಿಗಳ ಭವಿಷ್ಯದ ವೃತ್ತಿಜೀವನಕ್ಕೆ ಅಡಿಪಾಯವನ್ನು ಹಾಕಬಹುದು ಮತ್ತು ಹೆಚ್ಚು ಮುಖ್ಯವಾಗಿ ಗುಣಮಟ್ಟದ ಮಾನವ ಸಂಪನ್ಮೂಲಗಳನ್ನು ಉತ್ಪಾದಿಸುವಲ್ಲಿ ದೇಶದ ಆಸ್ತಿಯಾಗಬಹುದು.

ಉತ್ಸಾಹಭರಿತ ಸಹಪಠ್ಯ ಚಟುವಟಿಕೆಗಳ ವಾತಾವರಣವನ್ನು ಸೃಷ್ಟಿಸುವುದು ಎಂದರೆ ಎಲ್ಲಾ ಶಾಲಾ ಸಮುದಾಯಗಳು ಸಹಪಠ್ಯ ಚಟುವಟಿಕೆಗಳು ಆಯೋಜಿಸುವ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದು ಎಂದರ್ಥ. ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಅವರ ಆಸಕ್ತಿಗೆ ಅನುಗುಣವಾಗಿ ಕ್ಲಬ್ ಅಥವಾ ಸಮಾಜ ಸಂಘಗಳನ್ನು ವೈವಿಧ್ಯಗೊಳಿಸಿ ಅಭಿವೃದ್ಧಿ ಪಡಿಸಬೇಕು. ವಿದ್ಯಾರ್ಥಿಗಳ ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಪಠ್ಯ ಚಟುವಟಿಕೆಗಳ ಪ್ರಾಮುಖ್ಯತೆಯನ್ನು ಕಂಡುಕೊಳ್ಳಬೇಕು. ಆದಾಗ್ಯೂ ಸಹಪಠ್ಯ ಚಟುವಟಿಕೆಗಳನ್ನು ತಪ್ಪಾಗಿ ಬಳಸಿದರೆ ಹಾನಿಯಾಗುತ್ತದೆ. ಈ ಸಮಸ್ಯೆಯನ್ನು ಎಲ್ಲಾ ಶಿಕ್ಷಣ ತಜ್ಞರು ಕುಳಿತು ಸಮಾಲೋಚನೆ ಮಾಡಿ ಬಗೆಹರಿಸಬೇಕು.

## ಸಾರಾಂಶ

ಒಟ್ಟಾರೆಯಾಗಿ ಸಹಪಠ್ಯ ಚಟುವಟಿಕೆಗಳಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸುವ ವಿದ್ಯಾರ್ಥಿಗಳು ಉತ್ತಮ ಸಾಮಾಜಿಕ ಕೌಶಲ್ಯವನ್ನು ಹೊಂದಿರುತ್ತಾರೆ. ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಯ ವೈಯಕ್ತಿಕ ವ್ಯಕ್ತಿತ್ವವನ್ನು ರೂಪಿಸಲು ಸಮರ್ಥವಾಗಿದೆ. ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದು, ಆರೋಗ್ಯಕರ ವ್ಯಕ್ತಿತ್ವವನ್ನು ನಿರ್ಮಿಸುವುದು ಮತ್ತು ಅಂತಿಮವಾಗಿ ಶಿಸ್ತುಬದ್ಧ ಪೀಳಿಗೆಯನ್ನು ರೂಪಿಸುವುದು. ಸಹಪಠ್ಯ ಚಟುವಟಿಕೆಗಳು ಸಕಾರಾತ್ಮಕ ವ್ಯಕ್ತಿತ್ವವನ್ನು ರೂಪಿಸಲು ಮತ್ತು ಜವಾಬ್ದಾರಿಯುತ ಪ್ರಜ್ಞೆಯನ್ನು ಬೆಳೆಸಲು ಸಮರ್ಥವಾಗಿದೆ. ಸಾಮಾಜಿಕ, ಸಂಘ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಸಾಮಾಜಿಕ ಕೌಶಲ್ಯಗಳು ಅಭಿವೃದ್ಧಿಗೊಳ್ಳುತ್ತವೆ ಮತ್ತು ಭವಿಷ್ಯದಲ್ಲಿ ಉತ್ತಮ ಸಾಮಾಜಿಕ ಸಂಬಂಧಗಳನ್ನು ಹೊಂದಲು ಸಾಧ್ಯವಾಗುತ್ತದೆ. ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳು ಉದ್ಯೋಗ ಜಗತ್ತಿಗೆ ಬೇಕಾದ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾನೆ. ಇಂತಹ ಚಟುವಟಿಕೆಗಳು ಉದ್ಯೋಗ ಪಡೆಯಲು ಸಹಾಯ ಮಾಡುತ್ತವೆ ಹಾಗೂ ಆದಾಯದ ಪ್ರಮಾಣವನ್ನು ಹೆಚ್ಚಿಸುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಹಲವು ಬದಲಾವಣೆಗಳ ಜೊತೆಗೆ ಸಹಪಠ್ಯ ಚಟುವಟಿಕೆಗಳಲ್ಲಿ ಸೂಕ್ತ ಬದಲಾವಣೆ ಮಾಡಿ ಈ ಚಟುವಟಿಕೆಗಳಿಗೆ ಪ್ರಾಮುಖ್ಯತೆ ಕೊಡಬೇಕು.

## ಉಲ್ಲೇಖಗಳು


1. ಅಹ್ಮದ್, ಎ., & ಮಂಚಾ, ಎಸ್. ಸಹಪಠ್ಯ ಚಟುವಟಿಕೆಗಳು ಮತ್ತು ಸಾಮಾಜಿಕ ಕೌಶಲ್ಯಗಳ ಮೇಲೆ ಅದರ ಪರಿಣಾಮ. *ಶಿಕ್ಷಣ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಅಂತರರಾಷ್ಟ್ರೀಯ ಸಮ್ಮೇಳನ, 2016* (ಸೆಪ್ಟೆಂಬರ್), 775–781.
2. ಕಾರ್ಟನ್, ಎ., ಬಾರ್ಬ್ರಿ, ಎ., ಕೊಕ್ವಾರ್ಟ್, ಜೆ., ಒವಿಗ್ನರ್, ಎಚ್., ಅಮೌರಾ, ಸಿ., & ಒರೊಸ್ಜ್, ಜಿ. ಹದಿಹರೆಯದವರಿಗೆ ಕ್ರೀಡೆ-ಸಂಬಂಧಿತ ಪರಿಣಾಮಾತ್ಮಕ ಪ್ರಯೋಜನಗಳು ಪ್ರೌಢಾವಸ್ಥೆಯನ್ನು ಸಮೀಪಿಸುತ್ತಿದ್ದಂತೆ ಹೆಚ್ಚಾಗುತ್ತಿವೆ: ದೊಡ್ಡ ಪ್ರಮಾಣದ ಫ್ರೆಂಚ್ ತನಿಖೆ. *ಫ್ರಾಂಟಿಯರ್ಸ್ ಇನ್ ಸೈಕಾಲಜಿ, 12* (ಅಕ್ಟೋಬರ್). ೃಣಣಥಿ://ಜಠು.ಠಡಿರ/10.3389/ಜಿಥಿಧಿರ.2021.738343
3. ಹಾರ್ಕೊನೆನ್, ಯು. (2007). ಬ್ರಾನ್ಫೆನ್ ಬ್ರೆನ್ನರ್ ಪರಿಸರ ವ್ಯವಸ್ಥೆಗಳ ಮಾನವ ಅಭಿವೃದ್ಧಿಯ ಸಿದ್ಧಾಂತ. *ವಿ ಇಂಟರ್ನ್ಯಾಷನಲ್ ಕಾನ್ಫರೆನ್ಸ್ ವ್ಯಕ್ತಿಯ*

*ವೈಜ್ಞಾನಿಕ ಲೇಖನಗಳು. ಬಣ್ಣ. ನಿಸರ್ಗ. ಮ್ಯೂಸಿಕ್,* 1–19.

4. ಡಲ್ರಾಕ್, ಜೆ.ಎ., ವೈಸ್ಬರ್ಗ್, ಆರ್.ಪಿ., & ಪಚನ್, ಎಂ. ಮಕ್ಕಳು ಮತ್ತು ಹದಿಹರೆಯದವರಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಉತ್ತೇಜಿಸಲು ಪ್ರಯತ್ನಿಸುವ ಶಾಲಾ ನಂತರದ ಕಾರ್ಯಕ್ರಮಗಳ ಮೆಟಾ–ವಿಶ್ಲೇಷಣೆ. ಅಮೇರಿಕನ್ ಜರ್ನಲ್ ಆಫ್ ಕಮ್ಯುನಿಟಿ ಸೈಕಾಲಜಿ, 45, 294–309.
5. ಖಾನ್, ಡಬ್ಲ್ಯೂ., & ಇಕ್ಬಾಲ್, ಎಂ. ಶಾಲಾ ಪರಿಣಾಮಕಾರಿತ್ವದಲ್ಲಿ ಸಹಪಠ್ಯ ಚಟುವಟಿಕೆಗಳ ಪಾತ್ರ. *ಮಿಡಲ್–ಈಸ್ಟ್ ಜರ್ನಲ್ ಆಫ್ ಸೈಂಟಿಫಿಕ್ ರಿಸರ್ಚ್, 21*(11), 2169–2176. ߋಣಣಠಿ://ಜಔ.ಡಿಂ/10.5829/ಡಜಥ.ಟಜಡಿ.2014.21.11.21841
6. ಫ್ರೆಡ್ರಿಕ್ಸ್, ಜೆ.ಎ., & ಎಕ್ಲೆಸ್, ಜೆ.ಎಸ್. ಪಠ್ಯೇತರ ಒಳಗೊಳ್ಳುವಿಕೆ ಮತ್ತು ಹದಿಹರೆಯದ ಹೊಂದಾಣಿಕೆ: ಅವಧಿ, ಚಟುವಟಿಕೆಗಳ ಸಂಖ್ಯೆ ಮತ್ತು ಭಾಗವಹಿಸುವಿಕೆಯ ಅಗಲದ ಪರಿಣಾಮ. ಅಪ್ಲೈಡ್ ಡೆವಲಪ್ಮೆಂಟಲ್ ಸೈನ್ಸ್, 10(3), 132–146. ߋಣಣಠಿ://ಜಔ.ಡಿಂ/10.1207/1532480ಥಚಿಜ1003_3
7. ಮುಹಮ್ಮದ್, ಡಿ., ತಾಹಿರ್, ಎನ್., ಅಲಿ, ಎಚ್., & ಇಕ್ರಾ, ಎಂ. ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮ: ಪಾಕಿಸ್ತಾನದ ಬಹವಾಲ್ಪುರದ ಇಸ್ಲಾಮಿಯಾ ವಿಶ್ವವಿದ್ಯಾಲಯದ ಪ್ರಕರಣ ಅಧ್ಯಯನ. *ಬಲ್ಗೇರಿಯನ್ ಜರ್ನಲ್ ಆಫ್ ಸೈನ್ಸ್ ಅಂಡ್ ಎಜುಕೇಶನ್ ಪಾಲಿಸಿ, 6*(2), 257–272.
8. ರಹಮಾನ್, ಎಸ್.ಆರ್., ಇಸ್ಲಾಂ, ಎಂ.ಎ., ಆಕಾಶ್, ಪಿ.ಪಿ., ಪರ್ವಿನ್, ಎಂ., ಮೂನ್, ಎನ್.ಎನ್., & ನೂರ್, ಎಫ್.ಎನ್. ಯಂತ್ರ ಕಲಿಕೆಯಿಂದ ವಿದ್ಯಾರ್ಥಿಯ ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮಗಳು. *ಪ್ರಸ್ತುತ ಸಂಶೋಧನೆ ಇನ್ ಬಿಹೇವಿಯರಲ್ ಸೈನ್ಸಸ್, 2* (ಮೇ), 100057. ߋಣಣಠಿ://ಜಔ.ಡಿಂ/10.1016/ರಿ.ಛಿಡಿಚಿಜುಚಿ.2021.100057
9. ರಾಣಿ, ಎಂ., & ಕೇಶ್ವಾಲ್, ಎಚ್.ಎಸ್. ಬೌದ್ಧಿಕ ಅಂಗವೈಕಲ್ಯ ಹೊಂದಿರುವ ಮಕ್ಕಳ ಸಾಮಾಜಿಕ ಕೌಶಲ್ಯಗಳ ಅಭಿವೃದ್ಧಿಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮ. *ಜರ್ನಲ್ ಆಫ್ ಡಿಸೆಬಿಲಿಟಿ ಮ್ಯಾನೇಜ್ಮೆಂಟ್ ಅಂಡ್ ರಿಹ್ಯಾಬಿಲಿಟೇಶನ್, 2*(1), 18–21. ߋಣಣಠಿ://ರಿಜಟಡಿಂಟಿಟುಟಜ.ಡಿಂ/ಟಿಜಜಥ.ಖಿಠಿ/ರಿಜಟಡಿ/ಚಿಡಿಣಛಿಟಜ/ತುಜತಿ/18
10. ಸಿಂಗ್, ಎ. (2017). ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮ. *ಐಆರ್ಎ ಇಂಟರ್ನ್ಯಾಷನಲ್ ಜರ್ನಲ್ ಆಫ್ ಎಜುಕೇಶನ್ ಅಂಡ್ ಮಲ್ಟಿಡಿಸಿಪ್ಲಿನರಿ ಸ್ಟಡೀಸ್ (ಐಎಸ್ಎಸ್ಎನ್ 2455–2526), 6*(3), 241. ߋಣಣಠಿ://ಜಔ.ಡಿಂ/10.21013/ರಿಜಟ.ತ6.ಟಿ3.ಠ4
11. ಜಾಹಿದ್ ಬಶೀರ್ ಮತ್ತು ಶಫ್ಕತ್ ಹುಸೇನ್. (2012). ಪಾಕಿಸ್ತಾನದ ಅಬೋಟಾಬಾದ್ ಜಿಲ್ಲೆಯಲ್ಲಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳ ಮೇಲೆ ಸಹಪಠ್ಯ ಚಟುವಟಿಕೆಗಳ ಪರಿಣಾಮಕಾರಿತ್ವ – ಒಂದು ಕೇಸ್ ಸ್ಟಡಿ. *ಜರ್ನಲ್ ಆಫ್ ಎಜುಕೇಶನ್ ಅಂಡ್ ಪ್ರಾಕ್ಟೀಸ್, ಓಗಒಫ ಇಸ್ಲಾಮಾಬಾದ್, ಪಾಕಿಸ್ತಾನ, 3*(1), 44–49.